ಹನಿ



## ರೊನಾಲ್ಡೊ ಹೊಡೆತ

ಲಂಡನ್ನಿನಲ್ಲಿ ನಡೆಯುತ್ತಿರುವ ಚಾಂಪಿಯನ್ಸ್ ಟ್ರೋಫಿ ಫುಟ್‌ಬಾಲ್ ಪಂದ್ಯಾವಳಿಯ ಪ್ರಿ ನಾಕೌಟ್ ಹಂತದ ಪಂದ್ಯದಲ್ಲಿ ಸತತ ಎರಡು ಗೋಲು ಹೊಡೆಯುವ ಮೂಲಕ ತನ್ನ ಕ್ಲಬ್ 'ರಿಯಲ್ ಮ್ಯಾಡ್ರಿಡ್' ಪರವಾಗಿ ನೂರು ಗೋಲುಗಳನ್ನು ಹೊಡೆದ ದಾಖಲೆ ನಿರ್ಮಿಸಿದ್ದಾನೆ– ಕ್ರಿಸ್ಟಿಯಾನೊ ರೊನಾಲ್ಡೊ. ರೊನಾಲ್ಡೊ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್ಬನ್ನು ಬಿಟ್ಟು ರಿಯಲ್ ಮ್ಯಾಡ್ರಿಡ್ ಕ್ಲಬ್‌ಅನ್ನು ಸೇರಿದ್ದು 2009ರ ಜುಲೈನಲ್ಲಿ. ಅಲ್ಲಿಂದೀಚೆಗೆ ರಿಯಲ್ ಮ್ಯಾಡ್ರಿಡ್‌ಗೆ ಶುಕ್ರದೆಸೆಯೇ.

ರಿಯಲ್ ಮ್ಯಾಡ್ರಿಡ್ ಕ್ಲಬ್‌ಗೆ ಸೇರಲು ರೊನಾಲ್ಡೊ ಪಡೆದುಕೊಂಡ ಕಾಂಟ್ರಾಕ್ಟ್ ಮೊತ್ತ 132 ದಶಲಕ್ಷ ಅಮೆರಿಕನ್ ಡಾಲರ್! ಫುಟ್‌ಬಾಲ್ ಇತಿಹಾಸದಲ್ಲೇ ಇಷ್ಟೊಂದು ಭಾರೀ ಮೊತ್ತಕ್ಕೆ ಮಾರಾಟವಾದ ಇನ್ನೊಬ್ಬ ಆಟಗಾರನಿಲ್ಲ! ಆರು ವರ್ಷಗಳ ಆಟದ ಅವಧಿಯಲ್ಲಿ ಪ್ರತಿ ವರ್ಷವೂ ಕ್ಲಬ್ ಈತನಿಗೆ 11 ದಶಲಕ್ಷ ಪೌಂಡ್ ನೀಡುತ್ತದೆ! ಇದು ಇನ್ನೊಂದು ದಾಖಲೆ! ರಿಯಲ್ ಮ್ಯಾಡ್ರಿಡ್ ಲೆಕ್ಕಾಚಾರ ತಪ್ಪಿಲ್ಲ; ದುಡ್ಡು ಕೊಟ್ಟದ್ದೂ ವ್ಯರ್ಥವಾಗಿಲ್ಲ.

18ರ ಹರೆಯದಲ್ಲೇ ಈ ಹುಡುಗನ (ಬರ್ತ್‌ಡೇ 5–2–85) ಸಾಮರ್ಥ್ಯವನ್ನು ಗುರುತಿಸಿದವನು ಮ್ಯಾಂಚೆಸ್ಟರ್ ಯುನೈಟೆಡ್‌ನ ಮ್ಯಾನೇಜರ್ ಅಲೆಕ್ಸ್ ಫರ್ಗ್ಯುಸನ್. ಆಗಲೇ ಮ್ಯಾಂಚೆಸ್ಟರ್ ಕ್ಲಬ್‌ಗೆ 12.24 ದಶಲಕ್ಷ ಪೌಂಡ್‌ಗೆ ಮಾರಾಟವಾಗಿ ರೊನಾಲ್ಡೊ ದಾಖಲೆ ನಿರ್ಮಿಸಿದ್ದ. ಅದೇ ತಂಡದಲ್ಲಿ ಈಗಲೂ ಆಟವಾಡುತ್ತಿರುವ ಲಯೊನಲ್ ಮೆಸ್ಸಿಗೆ ಈ ರೊನಾಲ್ಡೊ ಸದಾ ಪ್ರತಿಸ್ಪರ್ಧಿ. ಮ್ಯಾಂಚೆಸ್ಟರ್ ಪರವಾಗಿ ಮೆಸ್ಸಿ ಮೊನ್ನೆ 200ನೇ ಗೋಲು ಹೊಡೆದಿದ್ದಾನೆ. ಅದಾದ ಮರುದಿನವೇ ರೊನಾಲ್ಡೊ ತನ್ನ ತಂಡದ ಪರವಾಗಿ ನೂರನೇ ಗೋಲು ಹೊಡೆದಿದ್ದಾನೆ. ಈ ಮೂಲಕ ರೊನಾಲ್ಡೊ ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಹೊಡೆದ ಗೋಲುಗಳ ಸಂಖ್ಯೆ 223 ದಾಟಿದೆ.

ರೊನಾಲ್ಡೊ 20ರ ಹರೆಯದವನಿದ್ದಾಗ ಆತನ ತಂದೆ ಸತ್ತುಹೋದ. ಸಾಯಲು ಕಾರಣ ಅತಿಯಾದ ಕುಡಿತ. ಅಲ್ಲಿಂದೀಚೆಗೆ ರೊನಾಲ್ಡೊ ಕುಡಿಯುವುದನ್ನು ಬಿಟ್ಟಿದ್ದಾನೆ. 'ಈತ ಪಾರ್ಟಿಯೊಂದರಲ್ಲಿ ಕುಡಿದು ಚಿತ್ತಾಗಿದ್ದಾನೆ' ಎಂದು ಇತ್ತೀಚೆಗೆ ಬರೆದ 'ಡೇಲಿ ಮಿರರ್' ಪತ್ರಿಕೆ ಕೊನೆಗೆ ಕೋರ್ಟಿನಲ್ಲಿ ಸುಳ್ಳು ಸುದ್ದಿಗಾಗಿ ದಂಡ ಕಟ್ಟಬೇಕಾಯಿತು. ತಂಗಿಯ ಜತೆ ಸೇರಿ 'ಸಿಆರ್7' (ಇದು ಈತನ ಟೀಶರ್ಟ್ ನಂಬರ್ ಕೂಡಾ ಹೌದು) ಎಂಬ ಫ್ಯಾಶನ್ ಬೂಟಿಕ್ ನಡೆಸುತ್ತಿರುವ ರೊನಾಲ್ಡೊ, ಆಡುತ್ತಿರುವುದು ಸ್ಪೇನ್‌ನ ಕ್ಲಬ್ ಪರವಾದರೂ, ವಿಶ್ವಕಪ್‌ನಲ್ಲಿ ಪೋರ್ಚುಗಲ್ ತಂಡಕ್ಕೆ ಈತನೇ ನಾಯಕ. ಫೇಸ್‌ಬುಕ್‌ನಲ್ಲಿ ಈತನ ಅಭಿಮಾನಿಗಳ ಸಂಖ್ಯೆ 10 ಲಕ್ಷ ದಾಟಿ ಆಗಲೇ ವರ್ಷ ಉರುಳಿದೆ. 'ಅತ್ಯಧಿಕ ಸಂಖ್ಯೆಯಲ್ಲಿ ಸೋಶ್ಯಲ್ ನೆಟ್‌ವರ್ಕ್ ತಾಣದಲ್ಲಿ ಅಭಿಮಾನಿಗಳನ್ನು ಪಡೆದ ಅಮೆರಿಕೇತರ ಮೊದಲ ತಾರೆ' ಎಂಬ ಖ್ಯಾತಿಯೂ ಈತನಿಗಿದೆ. ರೊನಾಲ್ಡೊ ಹೋಗುತ್ತಿರುವ ವೇಗ ನೋಡಿದರೆ, ಮೆಸ್ಸಿಯನ್ನೂ ಮೀರಿಸುವುದು ಕಷ್ಟವಲ್ಲ.



## ಜೈಲಿನಲ್ಲಿ ಆಮಿರ್

'ಹಣದ ಮೋಹ ಯುವ ತಾರೆಯರನ್ನು ಯಾವ ಅಧಃಪತನಕ್ಕೆ ತಳ್ಳುತ್ತದೆ' ಎನ್ನುವುದನ್ನು ಕಲಿಯಲು ಈ ಮೊಹಮ್ಮದ್ ಆಮಿರ್‌ನನ್ನು ನೋಡಿದರೆ ಸಾಕು! ಇನ್ನೂ 19ರ ಹರೆಯದ ಈ ಅವಿವಾಹಿತ ಯುವಕ ಇದೀಗ ಲಂಡನ್ನಿನ ಜೈಲು ಕೋಣೆ ಸೇರಿದ್ದಾನೆ. ಕ್ರಿಕೆಟ್ ಬುಕ್ಕಿಗಳಿಂದ ಹಣ ಪಡೆದು, ಸ್ಪಾಟ್ ಫಿಕ್ಸಿಂಗ್ ಆಟವಾಡಿದ ಪಾಕಿಸ್ತಾನದ ಭರವಸೆಯ ಕ್ರಿಕೆಟ್ ತಾರೆ ಆಮಿರ್ ಆರು ತಿಂಗಳ ಕಾಲ ಲಂಡನ್ನಿನ ಜೈಲಿನಲ್ಲೇ ಕೊಳೆಯಬೇಕಾಗಿದೆ. ಆರು ತಿಂಗಳು ದೊಡ್ಡ ವಿಷಯವಲ್ಲದಿರಬಹುದು; ಆದರೆ ಉದಯಿಸಿದ್ದ ಕ್ರಿಕೆಟ್ ತಾರೆಯೊಬ್ಬನ ಮಾನವಂತ ಬದುಕು ಮೂರಾಬಟ್ಟೆಯಾಗಲು ಈ ಶಿಕ್ಷೆ ಸಾಕು!

ಲಂಚ ಪಡೆದು ಆಟವಾಡಿದ್ದಕ್ಕಾಗಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್‌ನಿಂದ ಜೈಲು ಶಿಕ್ಷೆ ಮತ್ತು ಐದು ವರ್ಷಗಳ ಕ್ರಿಕೆಟ್ ಬಹಿಷ್ಕಾರ ಪಡೆದ ಪಾಕಿಸ್ತಾನದ ಮೂವರು ಆಟಗಾರರಲ್ಲಿ (ಇನ್ನಿಬ್ಬರು ಸಲ್ಮಾನ್ ಭಟ್ ಮತ್ತು ಮೊಹಮ್ಮದ್ ಆಸಿಫ್) ಈ ಆಮಿರ್ ಎಲ್ಲರಿಗಿಂತ ಚಿಕ್ಕ ಹುಡುಗ. 'ಪಾಕಿಸ್ತಾನ ಕ್ರಿಕೆಟ್ ಮಂಡಳಿಯು (ಪಿಸಿಬಿ) ನನಗೆ ನಿಯಮಗಳ ಬಗ್ಗೆ ಸೂಕ್ತ ತಿಳುವಳಿಕೆ ನೀಡಿಲ್ಲ. ನನ್ನನ್ನು ಬಲಿಪಶು ಮಾಡಲಾಗಿದೆ' ಎಂದೆಲ್ಲ ಶಿಕ್ಷೆಯ ಬಳಿಕ ಆಮಿರ್ ಬಡಬಡಿಸಿದ್ದಾನೆ! ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾದಾಗಲೇ ಭ್ರಷ್ಟಾಚಾರ ವಿರೋಧಿ ಪಾಠದ ತರಗತಿಗೆ ಹಾಜರಾಗಿದ್ದ ಮತ್ತು ಬುಕ್ಕಿಗಳ ಬಗ್ಗೆ ಸ್ಪಷ್ಟ ಎಚ್ಚರಿಕೆಯ ಸೂಚನೆಯನ್ನೂ ಓದಿ ಕಾಂಟ್ರಾಕ್ಟ್‌ಗೆ ಸಹಿ ಮಾಡಿರುವ ಆಮಿರ್ ಈಗ ಆಡುತ್ತಿರುವ ಕಪಟ ಮಾತುಗಳನ್ನು ನಂಬಲು ಯಾರೂ ತಯಾರಿಲ್ಲ. ಕೋಟಿಗಟ್ಟಳೆ ಹಣ ಕೊಡುವವರಿದ್ದರೆ ದೇಶದ ಮಾನವನ್ನೂ ಹರಾಜು ಹಾಕಲು ಸಿದ್ಧರಿರುವ ಇಂತಹ ಆಟಗಾರರಿಂದಲೇ ಕ್ರಿಕೆಟ್ ಕ್ರೀಡೆ ಇವತ್ತು ಇನ್ನಷ್ಟು ಹಾಸ್ಯಾಸ್ಪದವಾಗುತ್ತಿದೆ.

ಪಂಜಾಬಿನ ಗುಜ್ಜರ್‌ಖಾನ್‌ನಲ್ಲಿ ಸಾಮಾನ್ಯ ಕುಟುಂಬದಲ್ಲಿ ಜನಿಸಿದಾತ ಆಮಿರ್. (ಬರ್ತ್‌ಡೇ 13–4–92) ಬೀದಿಬದಿಯಲ್ಲಿ ಆಡುತ್ತಿದ್ದ ಈ ಹುಡುಗನ ವೇಗದ ಎಡಗೈ ಎಸೆತಗಳನ್ನು ನೋಡಿ 11ರ ಹರೆಯದಲ್ಲೇ ಕ್ರಿಕೆಟ್ ಮಂಡಳಿ ತರಬೇತಿಗೆ ಆಹ್ವಾನಿಸಿತ್ತು. ಇಮ್ರಾನ್ ಖಾನ್ ಬಳಿಕ ಪಾಕಿಸ್ತಾನದ ವೇಗದ ಪಡೆಯ ನೇತೃತ್ವ ವಹಿಸಿದ್ದ ವಾಸಿಂ ಅಕ್ರಂ ಕಣ್ಣಿಗೆ ಬಿದ್ದ ಹುಡುಗನ ಅದೃಷ್ಟ ಖುಲಾಯಿಸಿತು. ಅಕ್ರಂ ಮಾರ್ಗದರ್ಶನದಲ್ಲಿ ಬೆಳೆದು ಗುರುವನ್ನೂ ಮೀರಿಸುವ ನಿರೀಕ್ಷೆ ಹುಟ್ಟಿಸಿದ. 17ರ ಹರೆಯದಲ್ಲೇ ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯಕ್ಕೆ ಪಾದಾರ್ಪಣೆ ಮಾಡಿದ. 14 ಟೆಸ್ಟ್‌ಗಳು, 15 ಒಂದು ದಿನದ ಪಂದ್ಯಗಳು ಮತ್ತು 18 ಟ್ವೆಂಟಿ–20 ಪಂದ್ಯಗಳಲ್ಲಿ ಸಖತ್ ಮಿಂಚಿದ. ಆದರೆ ಹಣ ಮಾಡುವ ಹುಚ್ಚು ದಾರಿ ತಪ್ಪಿಸಿತು. ಬುಕ್ಕಿಗಳು ಕೊಟ್ಟ ದುಡ್ಡಿಗೆ ಕಣ್ಣು ಮುಚ್ಚಿ ಕೈಚಾಚಿದ. ಅವರು ಹೇಳಿದಂತೆ ನೋಬಾಲ್ ಎಸೆದ. ಬೌಲಿಂಗ್ ಮಾಡಿದ. ಅಪ್ಪ– ಅಮ್ಮನ ಏಳು ಮಕ್ಕಳಲ್ಲಿ ಕೊನೆಯವನಾದ ಈ ಹುಡುಗ ಹೀಗೆ ದಾರಿ ತಪ್ಪಿ ಜೈಲು ಸೇರಿದ್ದನ್ನು ನೋಡಿ, ಉಳಿದ ಸೋದರ– ಸೋದರಿಯರೂ ಈಗ ಮುಖ ಮುಚ್ಚಿಕೊಂಡಿದ್ದಾರೆ! ವರ್ಷದ ಹಿಂದೆ ಇದೇ ತಮ್ಮನ ಬಗ್ಗೆ ಅವರೇ ಹೆಮ್ಮೆಯಿಂದ ಹೇಳಿಕೊಂಡು ಓಡಾಡುತ್ತಿದ್ದರು!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65